Dharkasth Lands in Krishnarajanagar Taluk

(524) SRI H. VISWANATH (Krishnarajanagar).—Will the Minister for Revenue and Agriculture be pleased to state:—

(a) the number of acres of land notified as Darkasth in Krishnarajanagar Taluk since 1979 (yearwise information may be furnished);

(b) the number of persons who are allotted the notified lands; out of them the number of Harijans;

(c) whether any applications from the ryots requesting the lands have been registered ?

SRI S. BANGARAPPA (Minister for Revenue and Agriculture).—

(a) 184-01 acres as Notified on 1-7-1979.

(b) 42 persons have been allotted out of them 41 persons are Harijans

(c) Yes.

ಶ್ರೀ ಎಚ್. ವಿಶ್ವನಾಥ್.—ಸ್ವಾಮಿ, ಉತ್ತರದಲ್ಲಿ ೧೮೪ ಎಕರೆ ನೋಟಿಫೈ ಆಗಿದೆ ಎಂದು ಹೇಳಿದ್ದೀರಿ, ಆದರಲ್ಲಿ ಎಷ್ಟು ಜನ ಹರಿಜನರಿಗೆ ಜಮೀನನ್ನು ಹಂಚಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಎಂ. ವೀರಪ್ಪ ಮೊಯ್ಲಿ.(ಶ್ರೀ ಎಸ್. ಬಂಗಾರಪ್ಪನವರ ಪರವಾಗಿ ಉತ್ತರ ಕೊಟ್ಟರು).—

೧೮೪ ಎಕರೆ ೧ ಗುಂಟೆ ಜಮೀನನ್ನು ಮಂಜೂರಾತಿಗೆ ಲಭ್ಯವಿದೆಂದು ಪ್ರಕಟಿಸಲಾಗಿದೆ. ಇದರಲ್ಲಿ ೪೧ ಜನ ಹರಿಜನರಿಗೆ ಕೊಡಲಾಗಿದೆ, ಅವರಿಗೆ ಒಟ್ಟು ೮೪ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಉಳಿದ ಇತರರಿಗೆ ೩ ಎಕರೆ ಕೊಟ್ಟಿದ್ದಾರೆ ಒಟ್ಟು ೮೭ ಎಕರೆ ಕೊಡಲಾಗಿದೆ, ಉಳಿದದ್ದು ಬಾಕಿ ಇದೆ.

ಶ್ರೀ ಎಚ್. ವಿಶ್ವನಾಥ್.—ನೋಟಿಫೈ ಏರಿಯಾದಲ್ಲಿ ಬಾರದೇ ಇರತಕ್ಕಂಥ ಜಮೀನು ಎಷ್ಟಿದೆ ಎನ್ನುವ ಬಗ್ಗೆ ತಮ್ಮಲ್ಲಿ ಏನಾದರೂ ವಿವರವಿದ್ದರೆ ತಿಳಿಸಬೇಕು ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಪ್ರಶ್ನೆ ಇರುವುದು ಏನೆಂದರೆ ಎಷ್ಟು ದರಖಾಸ್ತು ಜಮೀನು ಮಂಜೂರಾತಿಗೆ ಲಭ್ಯವಿದೆ ಎಂದು ಕೇಳಿರುವುದಕ್ಕೆ, ೧೮೪ ಎಕರೆ ೧ ಗುಂಟೆ ಜಮೀನು ನೋಟಿಫೈ ಆಗಿದೆಂದು ತಿಳಿಸಲಾಗಿದೆ.

Opening a Police Out-post at Hire Bommahal Village in Koppal Taluk

(531) SRI V. P. MUDGAL (Koppal).—Will the Chief Minister be pleased to state.—

whether any action has been taken for opening of an out-post (Police) at Hire Bommahal Village in Koppal Taluk ?

SRI R. GUNDU RAO (Chief Minister).—

There is no proposal before Government for opening of a Police Out-post at Hire Bommahal Village in Koppal Taluk.

ಶ್ರೀ ವಿ. ಪಿ. ಮುದ್ನಾಲ್.—ಕೊಪ್ಪಲ್ ತಾಲ್ಲೂಕಿನಿಂದ ಬೊಮ್ಮಹಾಲ್ ಗ್ರಾಮ ೨೦,೨೨ಕಿಲೋ ಮೀಟರ್ ದೂರವಲ್ಲಿದೆ ಅಲ್ಲಿ ಕೊಲೆ, ಸುಲಿಗೆ ದರೋಡೆ. ಕಳವು ಆಗುತ್ತಿವೆ. ಆದುದರಿಂದ ಸರ್ಕಾರದವರು ಆ ಜಾಗದಲ್ಲಿ ಇನ್ನು ಮುಂದಾದರೂ ಒಂದು ಔಟ್ ಪೋಸ್ಟ್ ಠಾಣೆಯೊಂದನ್ನು ನಿರ್ಮಿಸಲು ಪ್ರಯತ್ನಿಸುತ್ತಾರೆಯೇ ?

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ಆ ಪ್ರಶ್ನೆಯೇ ಇಲ್ಲಿ ಉದ್ಭವವಾಗುವುದಿಲ್ಲ. ಏಕೆಂದರೆ ಅಲ್ಲಿ ಆ ತರಹ ಕೊಲೆ, ದರೋಡೆಗಳು, ಜಾಸ್ತಿಯಾಗುತ್ತಿಲ್ಲ. ಆ ರೀತಿಯಾವುದೇ ಯಾವುದೇ ರೀತಿಯು ದರೋಡೆ, ಕೊಲೆ, ಸುಲಿಗೆಗಳು ನಡೆಯಿಲ್ಲವೆಂದು ವರದಿಯಿಂದ ಗೊತ್ತಾಗಿದೆ, ಆದುದರಿಂದ ಸದ್ಯಕ್ಕೆ ಅವಶ್ಯಕತೆ ಇಲ್ಲವೆಂದು ಸರ್ಕಾರ ತೀರ್ಮಾನಕ್ಕೆ ಬಂದಿದೆ. ಪೋಲೀಸ್ ಸ್ಟೇಷನ್ ಆಗಿ ಅಲ್ಲಿ ಕೊಲೆ, ಸುಲಿಗೆ ಜಾಸ್ತಿ ಯಾಗಲೀ ಅಂಥ ಮಾನ್ಯ ಸದಸ್ಯರ ಅಭಿಪ್ರಾಯವೇನೋ ಗೊತ್ತಾಗಲಿಲ್ಲ. ಆ ರೀತಿಯಾವುದೇ ಯಾವುದೇ ಕೃತ್ಯ ನಡೆಯುದೇ ಇರುವುದರಿಂದ ಅಲ್ಲಿಗೆ ಅವಶ್ಯಕತೆ ಇಲ್ಲವೆಂದು ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ವಿ. ಪಿ. ಮುದ್ನಾಲ್.—ಸ್ವಾಮಿ, ಅದು ಕೊಪ್ಪಳದಿಂದ ೨೦ ೨೨ ಕಿಲೋ ಮೀಟರ್ ದೂರದಲ್ಲಿರುವುದರಿಂದ ಅಲ್ಲಿಗೆ ಏತಕ್ಕೆ ಒಂದು ಔಟ್-ಪೋಸ್ಟ್ ಠಾಣೆಯನ್ನು ತಾವು ತೆರೆದು ಕೊಲೆ ಸುಲಿಗೆ ಆಗುವುದನ್ನು ತಪ್ಪಿಸಬಾರದು ?

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಸಧ್ಯಕ್ಕೆ ಅಲ್ಲಿಗೆ ಅವಶ್ಯಕತೆ ಇಲ್ಲವೆಂದು ಸರ್ಕಾರ ಯೋಚನೆ ಮಾಡಿದೆ. ಮುಂದೆ ಅವರು ಹೇಳುವ ರೀತಿಯಲ್ಲಿ ಏನಾದರೂ ಆ ತರಹದ್ದು ಜಾಸ್ತಿಯಾದರೆ ಮುಂದೆ ನೋಡೋಣ.

ಅಧ್ಯಕ್ಷರು.—ಶ್ರೀ ಎನ್. ಬಿ. ಸರ್ವೇಸಾಯಿ-ಹಾಜರಿಲ್ಲ.

ನೆಕ್ಸ್‌ಟ್ ಶ್ರೀ ಪ್ರಭಾಕರ್ ತೇಲ್ಕರ್.

Separate Development Board for Hyderabad—Karnataka Area

575 SRI PRABHAKAR TELKAR (Chitapur).—Will the Minister for Finance and Planning be pleased to state:—

whether the Government intends to set up a separate Development Board exclusively for Hyderabad Karnataka Area for its development in all facets of life ?

SRI VEERAPPA MOILY (Minister for Finance and Planning).—

Government have recently constituted a Committee for reporting on the proposals for the development of Hyderabad-Karnataka Area.

SRI PRABHAKAR TELKAR.—The question was put earlier to the constitution of the Committee that has been done by our benevolent Government. I really congratulate our Chief Minister Sri R Gundu Rao for taking into consideration the feelings of all the legislators who were striving to have one Board for Hyderabad-Karnataka area which is most undeveloped. I request him to give some salient features of this Committee.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಶ್ರೀ ಧರ್ಮಸಿಂಗ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಹೈದರಾಬಾದ್ ಕರ್ನಾಟಕದ ಮೂರು ಪ್ರದೇಶಗಳಾದ ಗುಲ್ಬರ್ಗ, ಬೀದರ್, ರಾಯಚೂರ್, ಜಿಲ್ಲೆಗಳಲ್ಲಿಂತಕ್ಕ ಎಲ್ಲಾ ಸಂಸತ್ ಸದಸ್ಯರುಗಳನ್ನೂ, ವಿಧಾನ